ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಜಿ.ಎಸ್.ಆರ್. ವಕೀಲರಿಂದಃ-**

ನಾನು 10 ನೇ ತರಗತಿಯವರೆಗೆ ವಿದ್ಯಾಭಾಸ ಮಾಡಿರುತ್ತೇನೆ. ನಾನು ನೆಲ್ಲೂರಿನ ಮದಿವತ್ತಿ ಎಂಬ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ನನಗೆ 2011 ರಿಂದ ವಾದಿಯ ಪರಿಚಯವಿದೆ. ಮಾಲಿಸಿ ಶ್ರೀನಿವಾಸಲು ನಾಯ್ಡು 2014 ರ ಆಸುಪಾಸಿನಿಂದ ಪರಿಚಯಸ್ತ. ನಾನು ವಾದಿಯ ಹತ್ತಿರ ಸೈಟುಗಳಿಗೆ ಸಂಬಂಧಪಟ್ಟಂತೆ ವ್ಯವಹಾರ ಮಾಡಲು ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ದಾವಾ ಆಸ್ತಿಯನ್ನು ಹೊರತುಪಡಿಸಿ ವಾದಿಯ ಹೆಸರಿನಲ್ಲಿ ಬೇರೆ ಆಸ್ತಿಗಳು ಇವೆ. ವಾದಿ 1 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ಜಿ.ಪಿ.ಎ. ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ವಾದಿ ಆ ಜಿ.ಪಿ.ಎ. ಬರೆದುಕೊಡುವ ಮೊದಲಿನಿಂದಲೂ ಸಹ ಅವರ ಬಳಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಆ ಜಿ.ಪಿ.ಎ.ಯನ್ನು ನನ್ನ ಮುಂದೆಯೇ ಮಾಡಲಾಗಿದ್ದು ಆ ಜಿ.ಪಿ.ಎ.ಗೆ ನಾನು ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಆ ಜಿ.ಪಿ.ಎ.ಯನ್ನು ವಾದಿ ಮತ್ತು 1 ನೇ ಪ್ರತಿವಾದಿ ಇಬ್ಬರೂ ಕೂಡಿಯೇ ಬರೆಸಿದರು. ಆ ಜಿ.ಪಿ.ಎ.ಯಲ್ಲಿರುವ ಅಂಶಗಳನ್ನು ವಾದಿ ಮತ್ತು 1 ನೇ ಪ್ರತಿವಾದಿ ಓದಿ ತಿಳಿದುಕೊಂಡಿರುತ್ತಾರೆ ಆದರೆ ನನಗೆ ಓದಿ ತಿಳಿಸಿರುವುದಿಲ್ಲ. ಆ ಜಿ.ಪಿ.ಎ.ಯಲ್ಲಿನ ಅಂಶಗಳನ್ನು ವಾದಿ ಮತ್ತು 1 ನೇ ಪ್ರತಿವಾದಿ ಒಪ್ಪಿಕೊಂಡೆ ಸಹಿ ಮಾಡಿರುತ್ತಾರೆ. ಆ ಜಿ.ಪಿ.ಎ.ಯಲ್ಲಿ ಬರೆಯಲಾದ ಅಂಶಗಳು

ಸರಿಯಾಗಿರುತ್ತವೆ. ದಾವಾ ಆಸ್ತಿಯ ಸ್ವಾಧೀನವನ್ನು ಆ ಜಿ.ಪಿ.ಎ. ಪ್ರಕಾರ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಆಸ್ತಿಗೆ ಸಂಬಂಧಪಟ್ಟಂತೆ ಮಾರುಕಟ್ಟೆಯ ಮೌಲ್ಯ ನಿಗದಿಪಡಿಸಿ ಹಣ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮುಂದೆ ಹಣ ಪಡೆದುಕೊಂಡಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ.

ನಾನು 1 ನೇ ಪ್ರತಿವಾದಿಗೆ ವಿಶ್ವಾಸಿತನಾಗಿರುವುದಿಲ್ಲ. ನಾನು ವಿಶ್ವಾಸಿತನಾಗಿಲ್ಲದೇ ಇದ್ದರೂ ಸಹ ಆ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ವಾದಿಯೇ ನನಗೆ 1 ನೇ ಪ್ರತಿವಾದಿಯನ್ನು ಪರಿಚಯ ಮಾಡಿದ ಕಾರಣ ಅದಕ್ಕೆ ಸಹಿ ಮಾಡಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ನಾನು ಆ ದಾಖಲೆಗೆ ವಾದಿಯ ಬಳಿ ಕೆಲಸ ಮಾಡುತ್ತಿದ್ದ ಕಾರಣ ಸಹಿ ಮಾಡಿರುತ್ತೇನೆ. ನಾನು ವಾದಿಯ ಬಳಿ ಕೆಲಸ ಮಾಡುತ್ತಿರುವ ಕಾರಣ ವಾದಿ ಹೇಳಿದ ಎಲ್ಲಾ ದಾಖಲೆಗಳಿಗೂ ಓದದೇ ಸಹಿ ಮಾಡುತ್ತೇನೆ ಎಂದರೆ ಸಾಕ್ಷಿಯು ಈ ರೀತಿ ಸಹಿ ಮಾಡುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಆ ದಿನ 1 ನೇ ಪ್ರತಿವಾದಿಗೆ ಯಾವುದೇ ದಾವಾ ಆಸ್ತಿಯನ್ನು ಹಸ್ತಾಂತರ ಮಾಡಿರುವುದಿಲ್ಲ ಮತ್ತು ಹಣ ಪಾವತಿಯನ್ನು ಸಹ ನನ್ನ ಎದುರಿಗೆ ಮಾಡಿರುವುದಿಲ್ಲ. ಆ ದಾಖಲೆಯಲ್ಲಿರುವ ಎಲ್ಲಾ ಅಂಶಗಳು ವ್ಯವಹಾರದಂತೆ ಸರಿಯಾಗಿಯೇ ಇರುತ್ತವೆ ಎಂದರೆ ಸರಿ. ದಿನಾಂಕಃ 06-07-2015 ರಂದು ಆ ಜಮೀನಿನ ಭೂ ಪರಿವರ್ತನೆಗಾಗಿ ಮಧುಗಿರಿಯಲ್ಲಿ ಆ ದಾಖಲೆಗೆ ಸಹಿ

ಮಾಡಿರುತ್ತೇನೆ. ಆ ದಾಖಲೆಯಲ್ಲಿರುವ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ಅದರಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ದಿನಾಂಕಃ 06-07-2015 ರಂದು ಮಾಡಲಾದ ದಾಖಲೆಯಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ನಾನು ವಾದಿಯ ಬಳಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಕಾರಣ ಅವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಮೂಲಕ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾನ ಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಆ ಜಿ.ಪಿ.ಎ. ಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿಗೆ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ಬಳಿ ಕೆಲಸ ಮಾಡುತ್ತಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಓ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ